

# ಜೀವನ್ಮುಕ್ತಿ

★ ಪಿ.ಅಂಜನಪ್ಪ ಗುಂಡಗತ್ತಿ



ಬೆಳದಿಂಗಳು ಹಿಟ್ಟು ಚೆಲ್ಲಿದಂತೆ ಪಸರಿಸಿದೆ. ಆಗಸದಲ್ಲಿ ಅಲ್ಲೊಂದು ಇಲ್ಲೊಂದು ಚದುರಿದ ತರಹೇವಾರಿ ಮೋಡಗಳು. ತೆಳುಗಾಳಿಗೆ ಮೋಡಗಳು ತುಂಬು ಚಂದಿರಗೆ ಮುಸುಗೆಳೆಯುತ್ತಿವೆ. ಬಿರುಬೇಸಿಗೆಯ ರಣಬಿಸಿಲಿನ ಬೇಗೆ ನಿಧಾನವಾಗಿ ಕಡಿಮೆಯಾಗಿ ಸರಿ ರಾತ್ರಿ ವೇಳೆಗೆ ತಂಪಾಗುತ್ತಿದೆ. ಲೋಕ ನಿದ್ರಾವಶವಾಗಿದೆ. ಸವಿನಿದ್ರೆಯಲ್ಲಿ ಸಿಹಿಗನಸು ಕಾಣುವರೆಷ್ಟೋ? ಚಿರವಿರಹಿಗಳಾಗಿ ಉಸಿರುಗರೆಯುವರೆಷ್ಟೋ? ದಣಿದು ಬಸವಳಿದು ಗಾಢ ನಿದ್ರಾವಶರಾದ ಶ್ರಮಜೀವಿಗಳೆಷ್ಟೋ? ದಣಿದ ಜೀವಿಗಳ ಸಂತೈಸಿ ನವಚೈತನ್ಯ ಉದ್ದೀಪಿಸುವ ರಜನಿಯು ಹಗಲಿಗಿಂತ ಮಿಗಿಲಲ್ಲವೇ? ಮರುದಿನದ ಹೊಸ ಬದುಕಿಗೆ ನಿಜಕ್ಕೂ ಸ್ಫೂರ್ತಿದಾಯಿನಿ ಈ ನಿಶಾದೇವಿ. ಏನೆಲ್ಲಾ ನೋವು, ದುಃಖ ದುಮ್ಮಾನ, ಮಾನಾಪಮಾನ, ಚಡಪಡಿಕೆ, ಚಿಂತೆ, ಕೋಪ ತಾಪಗಳಿಂದ ಮುಕ್ತಗೊಳಿಸುವ ಅನುಪಮ ಶಕ್ತಿಶಾಲಿನಿ, ಈ ರಜನಿ! ಇಡೀ ವಾತಾವರಣ ಪ್ರಶಾಂತವಾಗಿದ್ದು ಚೇತೋಹಾರಿಯಾಗಿದೆ.